# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 94/2023

ಪ್ರ.ವ.ಬೋ. ದಿನಾಂಕ – 04-02-2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ಗಣೇಶ | ಪ್ರಾ.ಸಾ. | – 07 |
| ತಂದೆಯ ಹೆಸರು | – ದೇವೇಂದ್ರಪ್ಪ | ಚಾ.ಸಾ. | – 07 |
| ವಯಸ್ಸು | – 28 ವರ್ಷ | | |
| ಉದ್ಯೋಗ | – ವ್ಯವಸಾಯ | | |
| ವಾಸ ಸ್ಥಳ | – ಬಿ ದುರ್ಗ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ:1 ನನ್ನ ತಾಯಿ, ಚಾಸಾ:4 ರಿಂದ 6 ಮತ್ತು ಆರೋಪಿ ಗೊತ್ತು.

ಆರೋಪಿ ಮತ್ತು ನನ್ನ ನಡುವೆ ಆದ ಗಲಾಟೆ ಆಗಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ದಿ. 14.9.2022 ರಂದು ಸಂಜೆ 6 ಗಂಟೆಗೆ ನಮ್ಮ ಗ್ರಾಮದ ಕಾಶಿ ಮಹಾಲಿಂಗೇಶ್ವರ ಪ್ರೌಢಶಾಲೆ ಮುಂಭಾಗ ಆಟದ ಮೈದಾನದಲ್ಲಿ ವಾಲಿಬಾಲ್ ಆಡುತ್ತಿದ್ದಾಗ ಪಾಯಿಂಟ್ ವಿಚಾರದಲ್ಲಿ ಆರೋಪಿಯು ನನ್ನೊಂದಿಗೆ ಗಲಾಟೆ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಕೈ ಕಾಲುಗಳಿಂದ ಹೊಡೆದಿದ್ದು, ಗಲಾಟೆ ವಿಚಾರ ತಿಳಿದು ನಮ್ಮ ತಾಯಿ ಅಲ್ಲಿಗೆ ಬಂದಾಗ ಆರೋಪಿಯು ನಮ್ಮ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದು, ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು, ಚಾಸಾ:1 ರವರ ಹೊಟ್ಟೆಗೆ, ಬೆನ್ನಿಗೆ ಹೊಡೆದು ಅವರ ಸೀರೆಯನ್ನು ಎಳೆದಾಡಿ ಜಾಕೀಟನ್ನು ಹರಿದು ಹಾಕಿ ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿ ಅವರ ಕುತ್ತಿಗೆಗೆ ಕೈ ಹಾಕಿ

ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದನು, ಅಷ್ಟರಲ್ಲಿ ಚಾಸಾ:4 ರಿಂದ 6 ಜಗಳ ಬಿಡಿಸಿದ್ದು, ಚಾಸಾ:1 ಆಸ್ಪತ್ರೆಗೆ ಹೋಗಿ ದೂರು ಕೊಟ್ಟ ಬಗ್ಗೆ ಗೊತ್ತಾಯಿತು ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ:9 ಎಂದು ಗುರುತಿಸಲಾಯಿತು. ನಿಪಿ:9 ರಂತೆ ಹೇಳಿಕೆ ನೀಡಿದ್ದರೂ ಕೂಡ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರವಾಗಿ ವಕೀಲರಿಂದ –**

**ಇಲ್ಲ ಎನ್ನುತ್ತಾರೆ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.